1. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರ.

ಪುತ್ತೂರು ಕೃಷಿ ಮಾರುಕಟ್ಟೆ ಆದಾಯದಲ್ಲಿ ಸೋರುವಿಕೆ.

121(941) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚುನಾಯಿತ ಆಡಳಿತ ಮಂಡಳಿ ಅಧಿಕಾರಕ್ಕೆ ಬಂದ ನಂತರ ಪುತ್ತೂರು ಕೃಷಿ ಮಾರುಕಟ್ಟೆ ಸಮಿತಿಯು ಒಟ್ಟು ವರ್ಷವಾರು ಸಂಗ್ರಹಿಸಲ್ಪಟ್ಟ ಮಾರುಕಟ್ಟೆ ಶುಲ್ಕ ಎಷ್ಟು?

ಆ) ಆದಾಯ ಇಳಿಕೆಯಾಗಿದ್ದಲ್ಲಿ, ಕಾರಣವೇನು?

ಇ) ಆದಾಯ ಸೋರುವಿಕೆ ತಡೆಗಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಬಿ.ಎಸ್. ಪಾಟೀಲ್(ಸಾಸನೂರ) (ಕೃಷಿ ಮಾರುಕಟ್ಟೆ ಸಚಿವರು) :

ಅ) ದಿ: 26-5-2001 ರಂದು ಚುನಾಯಿತ ಸಮಿತಿ ಅಧಿಕಾರಕ್ಕೆ ಬಂದಿರುತ್ತದೆ. 2000-2001 ರಲ್ಲಿ ರೂ. 68.94 ಲಕ್ಷ ಹಾಗೂ 2001-2002ರಲ್ಲಿ ರೂ. 60.16 ಲಕ್ಷ ಮಾರುಕಟ್ಟೆ ಶುಲ್ಕ ರೂಪದಲ್ಲಿ ಆದಾಯ ಬಂದಿರುತ್ತದೆ.

ಆ) ಪ್ರಮುಖ ಕೃಷಿ ಹುಟ್ಟುವಳಿಗಳ ಧಾರಣೆ ಕುಸಿತದಿಂದಾಗಿ ಮಾರುಕಟ್ಟೆ ಶುಲ್ಕ ಆದಾಯದಲ್ಲಿ ಕಡಿಮೆಯಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ :- ಮಾನ್ಯ ಅಧ್ಯಕ್ಷರೆ, ಭಾರೀ ಆಶ್ಚರ್ಯವಾಗುತ್ತಿದೆ. ನಾನು ಕೇಳಿದಂಥ ಪ್ರಥಮ ಪ್ರಶ್ನೆಗೆ ಸರ್ಕಾರ ಕೊಟ್ಟಿರುವಂಥ ಉತ್ತರ ಪರ್‌ಫೆಕ್ಟಾಗಿ ಇಲ್ಲ. ಏಕೆ ನಾನು ಹೇಳುತ್ತಿದ್ದೇನೆಂದರೆ, 2000-2001ರಲ್ಲಿ 68.94ಲಕ್ಷ ಮಾರುಕಟ್ಟೆ ಶುಲ್ಕ ವಸೂಲಿಯಾಗಿದೆ 2001-2002ರಲ್ಲಿ 60.16 ಲಕ್ಷ ಮಾರುಕಟ್ಟೆ ಶುಲ್ಕ ವಸೂಲಿಯಾಗಿದೆ. ಆದಾಯ ಕಡಿಮೆಯಾಗಲು ಕಾರಣ ಕೇಳಿದ್ದಕ್ಕೆ ಕೃಷಿ ಹುಟ್ಟುವಳಿಗಳ ಧಾರಣೆ ಕುಸಿತದಿಂದ ಆದಾಯ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ನಾನು ಮಂತ್ರಿಗಳಲ್ಲಿ ಕೇಳಲಿಕ್ಕೆ ಇಚ್ಛಿಪಡುತ್ತೇನೆ. ಈ ಪುತ್ತೂರಿನ ಮಾರುಕಟ್ಟೆಗೆ ಬರುವಂಥದ್ದರಲ್ಲಿ ಪ್ರಮುಖ ಬೆಳೆ ಅಡಿಕೆಯಾಗಿದೆ. ಶೇಕಡ 75 ರಿಂದ 80 ಪರ್ಸೆಂಟ್ ಮಾರುಕಟ್ಟೆ ಶುಲ್ಕ ರೂಪದಲ್ಲಿ ಅಡಿಕೆಯಿಂದ ಬರುವಂಥದ್ದು. ಆದಕಾರಣ 2000-2001ರಲ್ಲಿ ಮಾರುಕಟ್ಟೆಗೆ ಬಂದ ಅಡಿಕೆ ಎಷ್ಟು? ಎರಡನೆಯದಾಗಿ, 2-3 ಕೋಟಿ ರೂಪಾಯಿಗಳನ್ನು ಮಾರುಕಟ್ಟೆಗೆ ಖರ್ಚು ಮಾಡಿ ಇನ್ನೂ ಕೂಡ ಆದನ್ನು ಸ್ಥಳಾಂತರಿಸದೆ ಬಾಕಿ ಇರುವ ಕಾರಣ ತೆಂಗಿನಕಾಯಿ, ಹಾಗೂ ಅಡಿಕೆ ವ್ಯವಹಾರಗಳು ಬೇರೆ ಬೇರೆ ಕಡೆ ಆಗುವಂಥ ಕಾರಣದಿಂದ, ನಂ.2 ವ್ಯವಹಾರಗಳು ವಿಶೇಷವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎಸ್. ಪಾಟೀಲ್(ಸಾಸನೂರ) (ಮಾರುಕಟ್ಟೆ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ರೀತಿಯಲ್ಲಿ, ಪುತ್ತೂರು ಮಾರುಕಟ್ಟೆಯಲ್ಲಿ ಅಡಿಕೆ ಆವಕ 1999-2000ನೇ ಸಾಲಿನಲ್ಲಿ 48,042 ಕ್ವಿಂಟಾಲ್, 2000-01ನೇ ಸಾಲಿನಲ್ಲಿ 81,614 ಕ್ವಿಂಟಾಲ್, 2001-02ನೇ ಸಾಲಿನಲ್ಲಿ 1 ಲಕ್ಷದ 59 ಸಾವಿರದ 707 ಕ್ವಿಂಟಾಲ್ ಬಂದಿರುತ್ತದೆ. ಇದು ಅಡಿಕೆ ಆರೈವಲ್ ಬಗ್ಗೆ ಮಾಹಿತಿ ಕೋರ್ಟ್‌ನಲ್ಲಿ ದಾವೆ ದಾಖಾಲಾಗಿದೆ. ಪುತ್ತೂರಿನಲ್ಲಿ ಸರ್ಕಾರ 2 ಕೋಟಿ 69 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪ್ರಾಂಗಣವನ್ನು ಎಲ್ಲಾ ಸುವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಿದೆ. ಅಲ್ಲಿಗೆ ಸ್ಥಳಾಂತರ ಮಾಡಬೇಕೆನ್ನುವ ವ್ಯವಸ್ಥೆಯಲ್ಲಿದ್ದಾಗ ಕೆಲವು ಜನರು ಕೋರ್ಟಿಗೆ ಹೋಗಿದ್ದಾರೆ. ಕೆಳ ಕೋರ್ಟಿನಲ್ಲಿ ತೀರ್ಪು ಸರ್ಕಾರದ ಪರವಾಗಿದೆ. ಮತ್ತೆ ಅವರು ಅಪೀಲ್ ಹೋಗಿದ್ದರಿಂದ ತಡವಾಗಿದೆ. ಆದಷ್ಟು ಬೇಗ ವಿಶೇಷ ಅಧಿಕಾರಿಯನ್ನು ನೇಮಿಸಿ, ಸ್ಟೇ ಆರ್ಡರ್ ಅನ್ನು ವೆಕೇಟ್ ಮಾಡುವುದಕ್ಕೆ ಸರ್ಕಾರ ಪ್ರಯತ್ನಿಸುತ್ತದೆ. ಆದರ ಜೊತೆಗೆ, ಮಾನ್ಯ ಸದಸ್ಯರು ನಂ. 2ರಲ್ಲಿ ವ್ಯವಹಾರವಾಗುತ್ತಿದೆ ಎಂಬ ಮಾತನ್ನು ಹೇಳಿದ್ದಾರೆ. ಇಲ್ಲಿ ನಮ್ಮ ಆರೈವಲ್ಸ್ ನೋಡಿದರೆ, ತಮಗೆ ಅರ್ಥವಾಗುತ್ತದೆ. ಪ್ರತಿ ವರ್ಷ ಅಡಿಕೆ ಆರೈವಲ್ 1999ರಲ್ಲಿ 47 ಸಾವಿರ ಕ್ವಿಂಟಾಲ್ ಇದ್ದರೆ 2001 ರಲ್ಲಿ 81 ಸಾವಿರ ಕ್ವಿಂಟಾಲ್ ಡಬ್ಬಲ್, 2002ರಲ್ಲಿ 1 ಲಕ್ಷದ 59 ಸಾವಿರ ಇದೂ ಕೂಡ ಡಬ್ಬಲ್; ಆ ರೀತಿ ಸೋರಿ ಹೋಗಿದ್ದರೆ, ಆರೈವಲ್ಸ್ ಪ್ರಮಾಣ ಈ ಮಟ್ಟಕ್ಕೆ ಎರಡು ಪಟ್ಟು ಹೆಚ್ಚಾಗುತ್ತಿರಲಿಲ್ಲ. ತಮ್ಮ ಸೋರಿಹೋಗುತ್ತಿದೆ ಎನ್ನುವ ಅನಿಸಿಕೆ ಏನಿದೆ ಆ ನಿಟ್ಟಿನಲ್ಲಿ ನಮ್ಮ ಅಂಕಿ-ಅಂಶಗಳನ್ನು ಹೇಳುತ್ತಿದ್ದೇನೆ. ಪ್ರತಿವರ್ಷ ಎರಡೆರಡು ಪಟ್ಟು ಹೆಚ್ಚು ಆಗುತ್ತಿರುವ ಸನ್ನಿವೇಶದಲ್ಲಿ ಸೋರಿಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ. ಅಕಸ್ಮಾತ್ ಏನಾದರೂ ಇದ್ದರೆ, ನಾನು ಸೂಕ್ತ ಕ್ರಮ ಜರುಗಿಸುತ್ತೇನೆ.

ಶ್ರೀ ಡಿ.ಎ. ಸದಾನಂದಗೌಡ:- ಈಗಾಗಲೇ ಕೋರ್ಟಿನಲ್ಲಿ ಕೇಸ್ ದಾಖಲಾಗಿವೆ. ಹಲವು ವರ್ತಕರು ಇನ್ನೂ ಕೋರ್ಟಿಗೆ ಹೋಗಿಲ್ಲ. ಸುಮಾರು 200-250 ವರ್ತಕರಲ್ಲಿ 20-30 ಜನರು ಕೋರ್ಟಿಗೆ ಹೋಗಿದ್ದಾರೆಂಬ ಮಾಹಿತಿ ನನ್ನ ಹತ್ತಿರವಿದೆ. ಉಳಿದ ವರ್ತಕರನ್ನು ಕಳೆದ 5 ವರ್ಷಗಳಿಂದ ಕೂಡ ಮಾರುಕಟ್ಟೆಗೆ ಏಕೆ ಸ್ಥಳಾಂತರಿಸಲು ಪ್ರಯತ್ನಿಸಲಿಲ್ಲ? ವರ್ಷಂಪ್ರತಿ ಲೈಸೆನ್ಸ್ ರಿನ್ಯೂವಲ್ ಆಗಬೇಕು. ಆ ಸಂದರ್ಭದಲ್ಲಿ ಕಡ್ಡಾಯವಾಗಿ ನೀವು ಮಾರ್ಕೆಟ್‌ನೊಳಗೆ ಹೋದರೆ ಮಾತ್ರ ನಿಮ್ಮ ಲೈಸೆನ್ಸ್ ರಿನ್ಯೂವಲ್ ಮಾಡುತ್ತೇವೆಂಬ ಆಧಾರದಲ್ಲಿ ಒತ್ತಡದಲ್ಲಿ ಇವರನ್ನು ಮಾರುಕಟ್ಟೆಗೆ ಸ್ಥಳಾಂತರಿಸಲಿಕ್ಕೆ ಏನು ತೊಂದರೆಗಳಿವೆ? ಇದಕ್ಕೆ ಕಾರಣವೇನು? ಸುಮಾರು 5 ವರ್ಷಗಳಿಂದ ಪ್ರತಿ ಅಧಿವೇಶನದಲ್ಲಿಯೂ ನಾನು ಪ್ರಶ್ನೆ ಕೇಳುತ್ತಿದ್ದೇನೆ. ಕೋರ್ಟಿನಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಕಾರಣ ಸ್ಥಳಾಂತರಿಸಲಿಕ್ಕಾಗುತ್ತಿಲ್ಲವೆನ್ನುತ್ತಿದ್ದಾರೆ. ತಾವು ಹೊಸಬರಿದ್ದೀರಿ. ಮಧ್ಯ ಪ್ರವೇಶಿಸಿ ವರ್ತಕರನ್ನು ಕರೆಸಿ ಮಾತನಾಡಿ, ಅವರ ಅವಶ್ಯಕತೆಗಳನ್ನು ಪೂರೈಸಿ ಇದನ್ನು ಸ್ಥಳಾಂತರಿಸಲು ಏಕೆ ಪ್ರಯತ್ನಿಸಬಾರದು? ಕೋರ್ಟಿನಲ್ಲಿ 5 ವರ್ಷಗಳಿಂದ ಉಳಿದ ಕೇಸ್ ಇದ್ದರೆ, ಅದರ ಸ್ಪೀಡ ಡಿಸ್‌ಪೋಸಲ್‌ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರ):- ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ್ದೇನೆ ಸರ್ಕಾರ ಅಷ್ಟೊಂದು ನಿರ್ಲಕ್ಷ್ಯದಿಂದ ಕುಳಿತಿಲ್ಲ. ಕೆಳ ಕೋರ್ಟಿನಲ್ಲಿ ನಮ್ಮ ಪರವಾಗಿ ಆದಮೇಲೆ, ಅವರು ಅಪೀಲ್ ಹೋದ ಮೇಲೆ, ಸರ್ಕಾರ ಕೂಡ ಆ ನಿಟ್ಟಿನಲ್ಲಿ ಸರ್ಕಾರಿ ವಕೀಲರ ಮೂಲಕ ಆದಷ್ಟು ತ್ವರಿತಗತಿಯಿಂದ ವಿಲೇವಾರಿಯಾಗಲು ಪ್ರಯತ್ನಿಸುತ್ತದೆ. ಈಗಾಗಲೇ

ನಾನು ಹೇಳಿದಂತೆ, ವಿಶೇಷಾಧಿಕಾರಿಯನ್ನು ನೇಮಿಸಿ ಆದಷ್ಟು ಬೇಗ ನಿಕಾಲ್ ಆಗುವ ರೀತಿಯಲ್ಲಿ ಮಾಡುತ್ತೇವೆ. ಕೋರ್ಟಿಗೆ ಕೆಲವೇ ಜನರು ಹೋಗಿದ್ದಾರೆ, ಉಳಿದವರನ್ನು ನೀವೇಕೆ ಒತ್ತಾಯ ಮಾಡುತ್ತಿಲ್ಲವೆಂದು ಹೇಳಿದ್ದೀರಿ. ಸರ್ವೆ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವಂತೆ, ಕೆಲವರು ಕೋರ್ಟಿಗೆ ಹೋದಾಗ ಉಳಿದವರನ್ನೂ ನೀವು ಒತ್ತಾಯಿಸಿದರೆ, ಕೆಲವು ಜನರು ಅಲ್ಲಿ, ಕೆಲವು ಜನರು ಇಲ್ಲಿ ಇರಲಿಕ್ಕೆ ವ್ಯವಹಾರಿಕವಾಗಿ practically, it is not possible. ಅದು ತಮಗೂ ಗೊತ್ತಿದೆ. ಅದಕ್ಕಾಗಿ ಎಷ್ಟೇ ಒತ್ತಾಯ ಮಾಡಿದರೂ ಕೂಡ ಕೋರ್ಟಿನಲ್ಲಿ ನಿಕಾಲ್ ಆಗುವವರೆಗೂ ಎಲ್ಲರನ್ನೂ ಸ್ಥಳಾಂತರಿಸುವ ವ್ಯವಹಾರ ಕಷ್ಟಕರವಾದ ಮಾತಿದ್ದರೂ, ಸಾಧ್ಯವಾದಷ್ಟು ಪ್ರಯತ್ನಿಸಿ ಯಾರು ಕೋರ್ಟಿಗೆ ಹೋಗಿಲ್ಲ, ಅವರನ್ನು ಸ್ಥಳಾಂತರಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಈ ರೀತಿ ಸ್ಥಳಾಂತರವಾಗದಿರುವುದಕ್ಕೆ ಮತ್ತು ಕೋರ್ಟಿಗೆ ಹೋಗಲು ಈಗಿನ ಆಡಳಿತ ಮಂಡಳಿ, ಅಧಿಕಾರಿಗಳು ಮತ್ತು ವರ್ತಕರು ಇವರೆಲ್ಲಾ ಪರೋಕ್ಷವಾಗಿ ಒಟ್ಟಿಗೆ ಸೇರಿದ ಕಾರಣವೇ, ಸ್ಥಳಾಂತರಿಸಲು ಭಾರಿ ತೊಂದರೆ ಇರುವಂಥದ್ದು ಎಂಬುದು ನನ್ನ ಗಮನಕ್ಕೆ ಬಂದಿದೆ. ತಾವು ಇದನ್ನು ವೆರಿಫೈ ಮಾಡಬೇಕು. ಆಡಳಿತ ಮಂಡಳಿ ಇದೆ. ನೇರವಾಗಿ ಆಡಳಿತ ಮಂಡಳಿ ಈ ಬಗ್ಗೆ ಯಾವುದೇ ಮುತುವರ್ಜಿ ವಹಿಸುತ್ತಿಲ್ಲ. ಸಂತೆ ಬದಲಾವಣೆ ಮಾಡಲು ಅವರು ಮುತುವರ್ಜಿ ವಹಿಸುತ್ತಿಲ್ಲ. ಆದ್ದರಿಂದ, ಆಡಳಿತ ಮಂಡಳಿಯವರು ವರ್ತಕರ ಜೊತೆ ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅಂಥ ಆಡಳಿತ ಮಂಡಳಿ ಮೇಲೆ ತಾವು ತುರ್ತು ನಿಗಾವಹಿಸಿ ಅವರ ಮೇಲೆ ಏನಾದರೂ ಆಕ್ಷನ್ ತೆಗೆದುಕೊಳ್ಳುವ ಪ್ರಯತ್ನ ಮಾಡಿದ್ದೀರಾ?

ಶ್ರೀ ಬಿ.ಎಸ್. ಪಾಟೀಲ್(ಸಾಸನೂರ):- ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ, ಕೋರ್ಟಿಗೆ ಹೋಗಿದ್ದು 1997ರಲ್ಲಿ. ಆದರೆ, ಆಡಳಿತ ಮಂಡಳಿ ಬಂದಿದ್ದು ದಿನಾಂಕ: 26.05.2001ರಲ್ಲಿ. ಒಂದು ವರ್ಷದ ಅವಧಿಯಲ್ಲಿ ಆಡಳಿತ ಮಂಡಳಿ ಬಂದಿದೆ. ಕೋರ್ಟಿಗೆ ಹೋಗಿದ್ದು 4-5 ವರ್ಷಗಳ ಹಿಂದೆ, ಹೀಗಾಗಿ ಆಡಳಿತ ಮಂಡಳಿಗೂ, ವ್ಯಾಪಾರಸ್ಥರಿಗೂ ಮಿಲಾಫ್ ಆಗುವಂಥ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲವೆಂಬುದು ನನ್ನ ಭಾವನೆ.

ಹಾರಂಗಿ ಕಾಮಗಾರಿಗಳ ಗುತ್ತಿಗೆದಾರರಿಗೆ ಹಣ ಪಾವತಿಸದೇ ಇರುವುದು

122(1182) ಶ್ರೀ ಪಾಪಣ್ಣ .ವಿ(ಹುಣಸೂರು) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಣಸೂರು ವಿಭಾಗದಲ್ಲಿ ಹಾರಂಗಿ ಬಲದಂಡೆ ನಾಲಾ ಗುತ್ತಿಗೆದಾರರಿಂದ ಕಳಪೆ ಕಾಮಗಾರಿ ನಡೆದಿದೆ ಎಂದು ತನಿಖೆಯಿಂದ ತಿಳಿದು ಬಂದಿದ್ದರಿಂದ ಶೇ. 28 ಕಡಿತಗೊಳಿಸಲು ಸರ್ಕಾರ ಮತ್ತು ಗುತ್ತಿಗೆದಾರರ ಮಧ್ಯೆ ಒಪ್ಪಂದವಾಗಿದ್ದು ನಿಜವಲ್ಲವೇ?

ಆ) ಹಾಗಾದರೆ, ಸಂಪೂರ್ಣ ಬಿಲ್ ಪಾವತಿಸದೆ 50 ಲಕ್ಷ ರೂ ಬಾಕಿ ಉಳಿಸಿಕೊಳ್ಳಲು ಕಾರಣವೇನು?

ಇ) ಹಾರಂಗಿ ಕಾಮಗಾರಿಗಳಿಗೆ ಗುತ್ತಿಗೆದಾರರಿಗೆ ಹಣ ಪಾವತಿಸದೆ ಇರುವುದರಿಂದ ಬಹಿಷ್ಕಾರ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?